ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ
ನ್ಯಾಯಾಲಯ, ಕುಶಾಲನಗರ

ದಿನಾಂಕ 4 ನೇ ಮಾರ್ಚ್ 2026

ಸಿ.ಸಿ. ನಂ. 1120/2025

ಫಿರ್ಯಾದಿಃ ಕರ್ನಾಟಕ ರಾಜ್ಯ (ಕುಶಾಲನಗರ ಸಂಚಾರಿ ಪೋಲೀಸರಿಂದ)

ವಿರುದ್ಧ

ಆರೋಪಿಃ ರಘು ಡಿ.ಡಿ

ದೋಷಾರೋಪಣೆ

**ಶ್ರೀಮತಿ ಚೈತ್ರ ಎಲ್, ಬಿ.ಬಿ.ಎಂ. ಎಲ್.ಎಲ್.ಬಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಕುಶಾಲನಗರ ಆದ ನಾನು ನಿಮ್ಮ ಮೇಲೆ ಆರೋಪಿಸುವುದೇನೆಂದರೆಃ**

ದಿನಾಂಕ 18.06.2025 ರಂದು ಸಮಯ 11.30 ಎ.ಎಂ ಗೆ ಕುಶಾಲನಗರ ನಗರ ಪೋಲಿಸ್ ಠಾಣಾ ವ್ಯಾಪ್ತಿಗೆ ಸೇರಿದ ಹೆಬ್ಬಾಲೆ ಗ್ರಾಮದಲ್ಲಿ ಹಾದುಹೋಗಿರುವ ಕುಶಾಲನಗರ ಕೊಣನೂರು ರಾಜ್ಯ ಹೆದ್ದಾರಿ 91 ರಲ್ಲಿ ಆರೋಪಿಯಾದ ನೀವು ಕೆಎ-12-ಸಿ-4092 ರ ಪಿಕ್ ಆಪ್ ವಾಹವನ್ನು ಕೊಣನೂರು ರಸ್ತೆ ಕಡೆಯಿಂದ ಹೆಬ್ಬಾಲೆ ಗ್ರಾಮದ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದ ಕಾರಣ ಭಾ.ನ್ಯಾ.ಸಂ.ಕಲಂ 281 ಬಿ.ಎನ್.ಎಸ್ ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

ಎರಡನೆಯದಾಗಿ ಅದೇ ದಿನ, ಅದೇ ದಿನಾಂಕ ಮತ್ತು ಸ್ಥಳದಲ್ಲಿ ಚಾಸಾ 1 ರವರು ಹೆಬ್ಬಾಲೆ ಗ್ರಾಮದ ಹಾರಿಕಾ ಕೇಕ್ ಹೌಸ್ ಮುಂದೆ ಟೀ ಕುಡಿಯುತ್ತಾ ಕುಳಿತಿದ್ದಾಗ ಎದುರಿಗಿರುವ ಸತೀಶರವರ ದಿನಸಿ ಅಂಗಡಿಯಲ್ಲಿ ಅಳಿಲುಗುಪ್ಪೆ ಗ್ರಾಮದ ವಾಸಿ ಚಂದ್ರಾಚಾರಿಯವರು ದಿನಸಿ ಸಾಮಾನು ತೆಗೆದುಕೊಂಡು ಬ್ಯಾಗ್ ಕೈಯಲ್ಲಿ ಹಿಡಿದುಕೊಂಡು ರಾಜ್ಯ ಹೆದ್ದಾರಿ 91 ರ ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ ಆರೋಪಿಯಾದ ನೀವು ಕೆಎ-12-ಸಿ-4092 ರ ಪಿಕ್ ಆಪ್ ವಾಹವನ್ನು ಕೊಣನೂರು ರಸ್ತೆ ಕಡೆಯಿಂದ ಹೆಬ್ಬಾಲೆ ಗ್ರಾಮದ ಕಡೆಗೆ ಅತಿವೇಗ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆ ಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದ ಚಂದ್ರಾಚಾರಿಯವರನ್ನು ಗಮನಿಸದೆ ಡಿಕ್ಕಿಪಡಿಸಿ ಪರಿಣಾಮ ಆದ ಅಪಘಾತದಿಂದ ಚಂದ್ರಾಚಾರಿಯವರ ಕಾಲು ಹಾಗೂ ಶರೀರದ ಭಾಗಗಳಿಗೆ ಗಾಯ ನೋವಾಗಿದ್ದವರನ್ನು ಆರೋಪಿಯಾದ ನೀವು ಉಪಚರಿಸಿ ಹೆಬ್ಬಾಲೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿ ಅವರ ಮನೆಗೆ ಕರೆದುಕೊಂಡು ಹೋಗಿ ಬಿಟ್ಟಿದ್ದು ಆದ ಅಪಘಾತದಿಂದ ಆದ ಗಾಯ ನೋವಿನಿಂದ ಬಳಲುತ್ತಿದ್ದ ಚಂದ್ರಾಚಾರಿಯವರನ್ನು ಅವರ ಮನೆಯವರು ದಿನಾಂಕ 19.06.2025 ರಂದು ಬೆಳಿಗ್ಗೆ ಚಿಕಿತ್ಸೆ ಬಗ್ಗೆ ಕುಶಾಲನಗರ ಸರ್ಕಾರಿ

Raghu

ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿರುವ ಕಾರಣ ಭಾ.ನ್ಯಾ.ಸಂ.ಕಲಂ 106 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಮಾಡಿರುತ್ತೀರಿ ಮತ್ತು ಇದು ನನ್ನ ಸಂಜ್ಞೆಯೊಳಗೆ ಬರುತ್ತದೆ.

## ದೋಷಾರೋಪಣೆ

ಪ್ರಶ್ನೆ: 1: ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ ದೋಷಾರೋಪಣೆಯನ್ನು ಅರ್ಥಮಾಡಿಕೊಂಡಿರಾ?

ಉ: ಅರ್ಥವಾಯಿತು

ಪ್ರಶ್ನೆ:2:ದೋಷಾರೋಪಣೆಯನ್ನು ಒಪ್ಪುವಿರಾ ಅಥವಾ ವಿಚಾರಣೆ ನಡೆಸಬೇಕೇ?

ಉ: ಸುಳ್ಳು, ವಿಚಾರಣೆ ನಡೆಸಲಿ

( ಈ ಮೇಲ್ಕಂಡ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಲಾಗಿದ್ದು, ಆತ ಕೊಟ್ಟ ಉತ್ತರಗಳನ್ನು ನನ್ನ ಕೈ ಬರಹದಲ್ಲಿ ಬರೆದುಕೊಂಡಿದ್ದೇನೆ ಹಾಗೂ ಮೇಲ್ಕಂಡ ಹೇಳಿಕೆ ನಿಜವಾದ ಹೇಳಿಕೆ ಆಗಿರುತ್ತದೆ ಎಂದು ಈ ಮೂಲಕ ದೃಢೀಕರಿಸಿದ್ದೇನೆ)

16/04/3/16

Raghu

ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ
ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಕುಶಾಲನಗರ